**ದಿನಾಂಕಃ 09.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ –**

ನಾನು ಎಸಿಬಿ ಕಚೇರಿಗೆ ಹೋದಾಗ, ಲಿಖಿತವಾಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಟೈಪ್ ಮಾಡಿಸಿರುತ್ತೇನೆ. ಅದನ್ನು ಬ್ಯಾನ್ಸ್ ಡೌನ್ ಬಿಲ್ಡಿಂಗಿನಲ್ಲಿ ಟೈಪ್ ಮಾಡಿಸಿರುತ್ತೇನೆ. ದೂರಿನ ಜೊತೆಗೆ ನಾನು 2 ದಾಖಲೆಗಳನ್ನು ನೀಡಿರುತ್ತೇನೆ. ನಾನು ನೀಡಿದ ದಿನವೇ ದೂರನ್ನು ನೋಂದಣಿ ಮಾಡಿಕೊಂಡಿರುತ್ತಾರೆ. ನಾನು ಆ ದಿನಕ್ಕಿಂತಮುಂಚೆ ಎಸಿಬಿ ಕಚೇರಿಗೆ ಹೋಗಿರುವುದಿಲ್ಲ.

ಟ್ರ್ಯಾಪಿಗೆ ಹೋಗುವ ಮುಂಚೆ ನನ್ನ ಅಂಗಶೋಧನೆಯನ್ನು ನಡೆಸಲಾಗಿತ್ತು. ಟ್ರ್ಯಾಪಿಗೆ ಹೋಗುವ ಮುಂಚೆ ಪೊಲೀಸರು ನೀಡಿದ ಹಣ ಬಿಟ್ಟು ಬೇರೆ ಯಾವುದೇ ವಸ್ತು ಇರಲಿಲ್ಲ ಎಂದರೆ ಸಾಕ್ಷಿಯು ಹಣ ಬಿಟ್ಟು, ನನಗೆ ಅಮಾನತ್ತಿನ ಅವಧಿಯ ಅರ್ಧ ಸಂಬಳವನ್ನು ನೀಡುವ ಬಗ್ಗೆ ಒಂದು ಚೀಟಿಯನ್ನು ಬರೆದುಕೊಂಡು ಬರಲು ಹೇಳಿದ್ದು ಅದನ್ನು ನಾನು ನನ್ನ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿದ್ದೆ. ಅದನ್ನು ನಾನು ನನ್ನ ಜೇಬಿನಲ್ಲೇ ಇಟ್ಟುಕೊಂಡಿದ್ದು, ನಂತರ ಆರೋಪಿಗೆ ನೀಡಿರುತ್ತೇನೆ.

ನನಗೆ ಘಟಕಕ್ಕೆ ನೇರವಾಗಿ ಹೋಗಿ ನನ್ನ ಅರ್ಧ ಸಂಬಳವನ್ನು ಕೇಳಲು ಯಾವುದೇ ತೊಂದರೆ ಇರಲಿಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.